**ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ನಂ: 1234, 5ನೇ ಮಹಡಿ, ಕೆ.ಎಸ್.ಎಸ್.ಐ.ಡಿ.ಸಿ, ಐಟಿ ಪಾರ್ಕ್, ಸೌತ್ ಬ್ಲಾಕ್**
**ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560010**
**ದೂ. 080-22372738** e-mail: karnregs@gmail.com

ಆರ್.ಡಿ.ಸಿ-ಇ.ಜಿ.ಎಸ್/261/ಉಖಾಯೋ 2022 ದಿನಾಂಕ: 18.07.2022

**ಇವರಿಗೆ**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೇ,**

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅಕುಶಲ ಮಹಿಳಾ ಮತ್ತು ಲಿಂಗತ್ವ ಅಲ್ಪಸಂಖ್ಯಾತರು (Transgenders) ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಹೆಚ್ಚುವರಿಯಾಗಿ ಶೇಕಡ 10ರಷ್ಟು ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡುವ ಕುರಿತು.

**ಉಲ್ಲೇಖ:**
1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನರೇಗಾ ವಾರ್ಷಿಕ ಪ್ರಧಾನ ಸುತ್ತೋಲೆ 2021-22 ರ ಪ್ಯಾರಾ 9.5 ರನ್ವಯ.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಗ್ರಾಅಪ 594 ಉಖಾಯೋ 2014, ದಿನಾಂಕ: 27-08-2014.

~~~~~~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನರೇಗಾ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಕುಶಲ ಮಹಿಳೆಯರಿಗೆ ಕಾಲ ಮತ್ತು ಚಲನ ವಲನ ಅಧ್ಯಯನದಲ್ಲಿ ಈಗಾಗಲೇ ಒಟ್ಟು ಕೆಲಸದ ಪ್ರಮಾಣದಲ್ಲಿ ಶೇಕಡ 10ರಷ್ಟು ರಿಯಾಯಿತಿ ನೀಡಲಾಗಿದ್ದು ಹಾಗೂ TMS ವರದಿಯನ್ವಯ SECURE ತಂತ್ರಾಂಶದಲ್ಲಿ ವಿನಾಯಿತಿಯ ಮೀಸಲಾತಿ ಅಳವಡಿಸಲಾಗಿರುತ್ತದೆ. ನರೇಗಾ ವಾರ್ಷಿಕ ಪ್ರಧಾನ ಸುತ್ತೋಲೆ 2021-22 ರ ಪ್ಯಾರಾ 9.5 ರಲ್ಲಿ ತಿಳಿಸಿದಂತೆ ಮಹಿಳೆಯರಿಗೆ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡಲು ಸೂಚಿಸಲಾಗಿರುತ್ತದೆ. ಇದರನ್ವಯ ಸದರಿ ರಿಯಾಯಿತಿಯಲ್ಲಿ ಹೆಚ್ಚುವರಿಯಾಗಿ ಶೇಕಡ 10% ರಷ್ಟು ರಿಯಾಯಿತಿ ನೀಡಬೇಕಾಗಿದ್ದು, ಒಟ್ಟಾರೆಯಾಗಿ ಶೇಕಡ 20% ರಷ್ಟು ರಿಯಾಯಿತಿ ನೀಡಲು ನಿರ್ಧರಿಸಲಾಗಿದೆ. 2021-22ನೇ ಸಾಲಿನಲ್ಲಿ ಶೇಕಡ 50.03 ಪ್ರತಿಶತ ಮಹಿಳಾ ಕೂಲಿ ಕಾರ್ಮಿಕರು ನರೇಗಾ ಅನುಷ್ಠಾನದಲ್ಲಿ ಭಾಗವಹಿಸಿದ್ದು, ಆಯುಕ್ತಾಲಯವು ಮಹಿಳೆಯರ ಭಾಗವಹಿಸುವಿಕೆಯನ್ನು 2022-23ನೇ ಸಾಲಿಗೆ ಕನಿಷ್ಠ ಶೇಕಡ 60 ಪ್ರತಿಶತಕ್ಕೆ ಹೆಚ್ಚಿಸಲು ಗುರಿ ನಿಗದಿಪಡಿಸಿದ್ದು, ಈ ಹಿನ್ನೆಲೆಯಲ್ಲಿ ಸದರಿ ವಿನಾಯಿತಿಯು ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಕೈಗೊಳ್ಳಲಾಗಿದೆ. ಈಗಾಗಲೇ ಉಲ್ಲೇಖ (2) ರನ್ವಯ ಹಿರಿಯ ನಾಗರೀಕರಿಗೆ ಮತ್ತು ವಿಕಲಚೇತನರಿಗೆ ನೀಡಲಾಗುತ್ತಿರುವ ವಿನಾಯಿತಿಯನ್ನು ಪಡೆಯುವ ಕೂಲಿಕಾರ್ಮಿಕರಿಗೆ ಅನ್ವಯವಾಗುವುದಿಲ್ಲ (ಒಂದು ವಿನಾಯಿತಿ ಮಾತ್ರ ನೀಡಬಹುದಾಗಿದೆ).

ಸದರಿ ರಿಯಾಯಿತಿ ಪ್ರಮಾಣವನ್ನು ನರೇಗಾ ಯೋಜನೆಯ ಕಾಮಗಾರಿಯಲ್ಲಿ ಶೇಕಡ 60% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಕಾರ್ಮಿಕರು ಹಾಜರಿದ್ದಲಿ/ ಭಾಗವಹಿಸಿದ್ದಲ್ಲಿ, ಮಾತ್ರ ಹೆಚ್ಚುವರಿಯಾಗಿ ಶೇಕಡ 10% ರಷ್ಟು ಕೆಲಸದ ಪ್ರಮಾಣದಲ್ಲಿ ರಿಯಾಯಿತಿಯನ್ನು ಮಹಿಳೆಯರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡುವಂತೆ ಕ್ರಮವಹಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

21/07/22

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
~~~~~~

**ಪ್ರತಿಯನ್ನು ಎಲ್ಲಾ ಅನುಷ್ಠಾನ ಇಲಾಖೆಗಳ ಮುಖ್ಯಸ್ಥರುಗಳ ಅಗತ್ಯ ಕ್ರಮಕ್ಕಾಗಿ:**

i. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
ii. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,
iii. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
iv. ಆಯುಕ್ತರು, ಪಶುಸಂಗೋಪನ ಇಲಾಖೆ, ವಿ.ವಿ.ಟವರ್, ಬೆಂಗಳೂರು
v. ಆಯುಕ್ತರು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ಗ್ರಾಮೀಣ ನೀರು ಸರಬರಾಜು ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು
vi. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
vii. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್ ರಸ್ತೆ, ಬೆಂಗಳೂರು.
viii. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು.
ix. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಉತ್ತರವಲಯ ಬಿಜಾಪುರ/ದಕ್ಷಿಣವಲಯ, ಕೆ.ಆರ್.ವೃತ್ತ, ಬೆಂಗಳೂರು.
x. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಬೆಂಗಳೂರು.
xi. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವ್ಖುದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿ ಮುಖೇನ)
3. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿ ಮುಖೇನ)

Wherever Business Correspondents (BC) are deployed by Banks, wage disbursement should be made by the banking network operated by these BCs.

**9.5 Schedule of Rates**

The State Government shall link the wages with the quantity of work done. It shall be paid according to the rural Schedule of Rates fixed after Time and Motion Studies (TMSs) for different types of work and different seasons, and revised periodically. A separate Schedule of rates shall be finalised for women, the elderly, people with disabilities and people with debilitating ailments, so as to improve their participation through productive work.

**9.6 Unskilled wage, Semi-skilled wage and Skilled wage**

The schedule of rates of wages for various unskilled labourers shall be fixed so that an adult person who has worked for eight hours, including an hour of rest, will earn a wage equal to the stipulated wage rate. The working hours of an adult worker shall be flexible, but shall not spread over more than twelve hours on any day. Services of the semi-skilled workers other than mates and skilled workers may be procured by the Project Implementing Agencies by following transparent processes. Wages payable to such workers will also be decided by the Project Implementing Agencies.

Central Government vide Notification No. S.O.1206 (E) dated 15.03.2021 has notified the State-wise wage rate for unskilled manual workers under the Mahatma Gandhi NREGA for the FY 2021-22.

**9.7 Enabling Structures of Payment Systems**

Enabling Structures of Payment Systems under Mahatma Gandhi NREGA: e-FMS and Ne-FMS, through PFMS.

**9.7.1** Electronic Fund Management System (e-FMS): e-FMS provides a platform for making e-payments to Mahatma Gandhi NREGA workers, staff and vendors (wages, material and administrative expenses) using the payment network of financial Institutions e.g. NEFT/ RTGS/ Electronic Cash Transfer (ECS)/Aadhaar Based Payment System (APBS) / NACH/ Sanchaya Post. This reduces delay in payments.

Efforts may be made to implement e-FMS at all locations. All States/ UTs are advised to review the reasons for not implementing e-FMS at

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, E-mail:karnregs@gmail.com

ಸಂಖ್ಯೆ: ಗ್ರಾಅಪ 594 ಉಖಾಯೋ 2014 ದಿನಾಂಕ:27-08-2014

## ಸುತ್ತೋಲೆ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿಕಲಚೇತನರಿಗೆ ಹಾಗೂ ಹಿರಿಯ ನಾಗರೀಕರಿಗೆ ಮಾರ್ಗ ಸೂಚಿಗಳ ಪ್ರಕಾರ ಸೌಲಭ್ಯಗಳನ್ನು ಒದಗಿಸಿರುವ ಕುರಿತು ಹಾಗೂ ಅವರ ಹಕ್ಕುಗಳ ರಕ್ಷಣೆಗೆ ಆದ್ಯತೆ ನೀಡಿದ ಬಗ್ಗೆ.

ಉಲ್ಲೇಖ: 1) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಹೊರಡಿಸಿರುವ ಕಾರ್ಯಚರಣೆಯ ಮಾರ್ಗಸೂಚಿಗಳು 2013 ನಾಲ್ಕನೇ ಅವೃತ್ತಿ.
2) ಸರ್ಕಾರದ ಆದೇಶ ಸಂ: ಗ್ರಾಅಪ 451 ಉಖಾಯೋ 2014 ಬೆಂಗಳೂರು ದಿನಾಂಕ:02-08-2014

****

ದೇಶದ ಗ್ರಾಮೀಣ ಭಾಗದಲ್ಲಿರುವ ಬಡ ಕುಟುಂಬಗಳ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವುದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಇದರ ಜೊತೆಗೆ ಗ್ರಾಮೀಣ ಸಮಾಜದಲ್ಲಿ ವಿವಿಧ ದುರ್ಬಲ ಗುಂಪುಗಳು ಕೂಡ ಇರುತ್ತದೆ. ಇಂತಹ ದುರ್ಬಲ ಗುಂಪುಗಳಿಗೆ ಸಾಮಾಜಿಕ ಸಂರಕ್ಷಣೆಯನ್ನು ಒದಗಿಸುವುದು ಅತ್ಯವಶ್ಯಕವಾಗಿರುತ್ತದೆ ಮತ್ತು ಇದರ ಕಡೆ ಹೆಚ್ಚಿನ ಗಮನ ಹರಿಸಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಈ ಗುಂಪುಗಳು ಅಭಿವೃದ್ಧಿ ಪರದಿಂದ ಹೊರಗುಳಯಬೇಕಾಗುತ್ತದೆ. ದುರ್ಬಲ ಗುಂಪುಗಳನ್ನು ಕೇಂದ್ರ ಸರ್ಕಾರವು ಈ ಕೆಳಕಂಡಂತೆ ವಿಶೇಷ ಗುಂಪುಗಳಾಗಿ ವರ್ಗೀಕರಿಸಲಾಗುತ್ತದೆ.

1) ವಿಕಲಚೇತನರು.
2) ಆದಿಕಾಲದ ಬುಡಕಟ್ಟು ಜನಾಂಗ
3) ಅಲೆಮಾರಿ ಬುಡಕಟ್ಟು ಜನಾಂಗ
4) ಸೂಚಿತ ಬುಡಕಟ್ಟು ಜನಾಂಗ
5) ವಿಶೇಷ ಸ್ಥಿತಿಯಲ್ಲಿರುವ ಮಹಿಳೆಯರು
6) 65 ವರ್ಷ ಮೀರಿದ ಹಿರಿಯ ನಾಗರೀಕರು
7) ಎಚ್.ಐ.ವಿ. ಪೀಡಿತರು
8) ಆಂತರಿಕವಾಗಿ ಸ್ಥಳಾಂತರಿಸಲ್ಪಟ್ಟ ಜನರು

ಮೇಲೆ ಗುರುತಿಸಲಾದ ವಿಶೇಷ ಗುಂಪುಗಳಲ್ಲಿ ವಿಕಲಚೇತನರು ಮತ್ತು 65 ವರ್ಷ ಮೀರಿದ ಹಿರಿಯ ನಾಗರೀಕರಿಗೆ ಈಗಾಗಲೇ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಹಿಂದೆ ಕಾಮಗಾರಿಗಳಲ್ಲಿ ನಿರ್ವಹಿಸುವವರಿಗೆ ಕೆಲಸದ ಪ್ರಮಾಣದಲ್ಲಿ ಶೇಕಡಾ 25 ರಷ್ಟು ರಿಯಾಯಿತಿಯನ್ನು ನೀಡಿದ್ದು, ಅದನ್ನು ಇತ್ತೀಚೆಗೆ ಸದರಿ ಗುಂಪುಗಳಿಗೆ ಕೆಲಸ ಪ್ರಮಾಣದಲ್ಲಿ ಶೇಕಡಾ 50ರಷ್ಟಿಗೆ ರಿಯಾಯಿತಿಯನ್ನು ಹೆಚ್ಚಿಸಿ ಆದೇಶವನ್ನು ಉಲ್ಲೇಖ (2)ರಲ್ಲಿ ಹೊರಡಿಸಲಾಗಿದೆ. ಇದಲ್ಲದೇ, ವಿಶೇಷವಾಗಿ ವಿಕಲಚೇತನರಿಗೆ ತಮ್ಮ ನಿವಾಸದಿಂದ ಕಾಮಗಾರಿ ಸ್ಥಳಕ್ಕೆ ಹೋಗಿಬರಲು ಕೂಲಿದರದಲ್ಲಿ ಶೇಕಡಾ 10 ರಷ್ಟು ಪ್ರಮಾಣ ಭತ್ಯೆಯನ್ನಾಗಿ ನೀಡುತ್ತಿರುವುದು ತಮಗೆ ತಿಳಿದಿರುವ ವಿಷಯವಾಗಿರುತ್ತದೆ. ವಿಕಲಚೇತನರನ್ನು ಅಶಕ್ತ ಗುಂಪಾಗಿ ಪರಿಗಣಿಸಲಾಗಿದೆ. ವಿಕಲಚೇತನರ ಅಂಗವೈಕಲ್ಯದ ಪ್ರಮಾಣವನ್ನು ಶೇಕಡಾ 40 ರಷ್ಟು ಹೊಂದಿರುವವರನ್ನು ವಿಶೇಷ ವರ್ಗವಾದ ದುರ್ಬಲ ಗುಂಪೆಂದು ಪರಿಗಣಿಸಲಾಗಿರುತ್ತದೆ. ಸರ್ಕಾರವು ಕೂಡ ಈ ಗುಂಪಿಗೆ ಹೆಚ್ಚಿನ ಆದ್ಯತೆ ನೀಡಿರುತ್ತದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ

S.sutt

ವಿಕಲಚೇತನರನ್ನು ಒಂದು ಕುಟುಂಬವಾಗಿ ಪರಿಗಣಿಸಿ, ಅವರಿಗೆ ಉದ್ಯೋಗ ಚೀಟಿಯನ್ನು ಪ್ರತ್ಯೇಕವಾಗಿ ನೀಡಿ, ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಖಾತರಿ ಉದ್ಯೋಗವನ್ನು ದೊರಕುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲೆ ಇರುತ್ತದೆ.

ಹಿರಿಯ ನಾಗರೀಕರಿಗೆ ಸಂಬಂಧಿಸಿದಂತೆ, ಅವರುಗಳ ಕುಟುಂಬದವರು ಅಲಕ್ಷ್ಯಮಾಡಿ ಪೋಷಣೆಯನ್ನು ಮಾಡದಿದ್ದಲ್ಲಿ ಅಂತಹ ಹಿರಿಯ ನಾಗರೀಕರಿಗೆ ವಿಶೇಷವಾದ ಬೆಂಬಲ ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಈ ಗುಂಪಿನ ವ್ಯಕ್ತಿಗಳನ್ನೂ ಸಹ ವಿಶೇಷ ವರ್ಗದಡಿ ಗುರುತಿಸಿ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವಾಗಿರುತ್ತದೆ ಮತ್ತು ಇವರುಗಳಿಗೆ ಕೆಲಸ ಮಾಡಬಹುದಾದ ಕಡಿಮೆ ದೈಹಿಕ ಶ್ರಮ ಬಯಸುವ ಕೆಲಸಗಳನ್ನು ಗುರುತಿಸಿ ನೀಡಬೇಕಾಗಿರುತ್ತದೆ.

ಈ ಸಂಬಂಧ, ವಿಕಲಚೇತನರು ನಿರ್ವಹಿಸಬೇಕಾದ ಕೆಲಸದ ಕಾಮಗಾರಿಗಳನ್ನು ಅವರುಗಳ ಅಂಗವೈಕಲ್ಯದ ವಿವಿಧ ಪ್ರಮಾಣಗಳನ್ನು ಆಧರಿಸಿ ಹಾಗೂ ಹಿರಿಯ ನಾಗರೀಕರು ಅವರುಗಳ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸಬೇಕಾದ ಕುಟುಂಬಗಳನ್ನು ಮಾರ್ಗಸೂಚಿಗಳಲ್ಲಿ ಸೂಚಿಸಿದಂತೆ ಪ್ರತ್ಯೇಕವಾಗಿ ಗುರುತಿಸಿ ಅನುಬಂಧದಲ್ಲಿ ಲಗತ್ತಿಸಿ ತೋರಿಸಿದೆ.

ಅಂಗವಿಕಲರಿಗೆ ಗುರುತಿಸಲಾದ ಕಾಮಗಾರಿಗಳ ಕೆಲಸವನ್ನು ಸಾಧ್ಯವಾದಷ್ಟು ಯೋಜನೆ ಕೆಲಸಕ್ಕೆ ಆಯ್ಕೆ ಮಾಡಲು ಪ್ರಯತ್ನಿಸಬೇಕು. ವಿಕಲಚೇತನರನ್ನು ಮತ್ತು ವಿಶೇಷ ವರ್ಗದ ಜನರಿಗೆ ವೇತನ ತಾರತಮ್ಯ ಮಾಡಲು ಯಾವುದೇ ಸಂಧರ್ಭದಲ್ಲಿ ಅವಕಾಶವಿರುವುದಿಲ್ಲ ಇತರೆ ಸಾಮಾನ್ಯ ಕೆಲಸಗಾರರಿಗೆ ನಿಗಧಿಪಡಿಸಿದ ರೀತಿಯಲ್ಲಿಯೇ, ಎಲ್ಲರಿಗೂ ಸಮಾನ ವೇತನ ನೀಡಬೇಕಾಗಿದೆ. ಆದಷ್ಟು ಸಾಧ್ಯವಾದ ಮಟ್ಟಿಗೆ ಅಂಗವಿಕಲರಿಗೆ ವಾಸಿಸುವ ಸ್ಥಳದಲ್ಲಿಯೇ, ಕಾಮಗಾರಿಗಳ ಕೆಲಸವನ್ನು ಗೊತ್ತುಪಡಿಸಿ ನೀಡಬೇಕು. ಅಂಗವಿಕಲ ವ್ಯಕ್ತಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ಷೇತ್ರದಲ್ಲಿ ಕಾಯಕ ಬಂಧು ಆಗಿ ಕೆಲಸ ನಿರ್ವಹಿಸಲು ಆದ್ಯತೆಯನ್ನು ನೀಡಬೇಕು. ಇದಲ್ಲದೇ, ಕಾರ್ಮಿಕನಾಗಿ ಕೆಲಸಗಾರರಿಗೆ ಬೇಕಾದ ಕುಡಿಯುವ ನೀರು ಮತ್ತು ಮಹಿಳಾ ಕೆಲಸಗಾರರ ಸಣ್ಣ ವಯಸ್ಸಿನ ಮಕ್ಕಳ ಲಾಲನೆ ಪಾಲನೆಯಂತಹ ಕೆಲಸವನ್ನು ಕಾಮಗಾರಿ ಸ್ಥಳದಲ್ಲಿ ನೀಡಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ವಿಕಲಚೇತನ ಕೂಲಿ ಕಾರ್ಮಿಕರನ್ನು ಕಾಮಗಾರಿಯ ಸ್ಥಳದಲ್ಲಿ ಗೌರವದಿಂದ ಕಾಣಬೇಕು. ಯಾವುದೇ ಸಂಧರ್ಭದಲ್ಲಿ ಅವರನ್ನು ಅವಮಾನಿಸಬಾರದು, ಮನಸ್ಸಿಗೆ ನೋವು ಉಂಟಾಗದಂತೆ ನಡೆದುಕೊಳ್ಳಬೇಕು. ಇವುಗಳ ಕುರಿತು ಕೆಲಸಗಾರರಲ್ಲಿ ತಿಳುವಳಿಕೆ ಮತ್ತು ಜಾಗೃತಿ ಮೂಡಿಸಬೇಕು. ಅಂಗವಿಕಲರಿಗೆಲ್ಲರಿಗೂ 100 ದಿನಗಳ ಖಾತರಿ ಉದ್ಯೋಗವನ್ನು ದೊರಕಿಸುವಂತೆ ಮಾಡಲು ಕ್ರಮವಹಿಸಬೇಕು.

ಅಂಗವಿಕಲರು ಹಾಗೂ ಹಿರಿಯನಾಗರೀಕರು ಕುರಿತಂತೆ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ತಿಂಗಳು ತಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಎಲ್ಲಾ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಕರೆದು ಒಂದು ಸಭೆಯನ್ನು ಕುರಿತು, ಪರಿಶೀಲನೆಯನ್ನು ನಡೆಸಬೇಕು ಹಾಗೂ ಅವರುಗಳ ಕುಂದು ಕೊರತೆಗಳ ಬಗ್ಗೆ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮೇಲೆ ನೀಡಿರುವ ಸೂಚನೆಗಳನ್ನು ತಪ್ಪದೆ ಪಾಲಿಸಲು ಸೂಚಿಸಿದೆ.

2/9/14

(ಮುನೀಷ್ ಮೌದ್ಗಿಲ್)
ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು

S.suttole